# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಕೃಷಿ ಮತ್ತು ಜಲಾನಯನ ಅಭಿವೃದ್ಧಿ ಇಲಾಖೆಗಳ ಪುನರ್ ಸಂಘಟನೆ– ಜಾಗೃತ ಕೋಶ, ಸಚಿವಾಲಯ ವಿಭಾಗ ಇದರ ಕರ್ತವ್ಯ ಮತ್ತು ಜವಾಬ್ದಾರಿಗಳನ್ನು ನಿಗಧಿ ಪಡಿಸುವ ಬಗ್ಗೆ.

**ಓದಲಾಗಿದೆ:**

1) ಸರ್ಕಾರದ ಆದೇಶ ಸಂಖ್ಯೆ: ಕೃಇ 166 ಕೃಪಸೇ 2014, ದಿನಾಂಕ: 12–08–2011 ಮತ್ತು 08–07–2014.
2) ಸರ್ಕಾರದ ಅಧಿಸೂಚನೆ ಸಂಖ್ಯೆ:ಕೃಇ 31 ಕೃಪವ 2014, ದಿನಾಂಕ: 04–09–2014.
3) ಕೃಷಿ ಆಯುಕ್ತರ ಪತ್ರ ಸಂಖ್ಯೆ: ಸಿಬ್ಬಂದಿ–2/ಲಿಪಿಕ/ವಿವ/34/2011–12, ದಿನಾಂಕ: 11–10–2014.

*********

**ಪ್ರಸ್ತಾವನೆ**

ಮೇಲೆ (1)ರಲ್ಲಿ ಓದಲಾದ ಸರ್ಕಾರದ ಆದೇಶಗಳಲ್ಲಿ ಕೃಷಿ ಮತ್ತು ಜಲಾನಯನ ಅಭಿವೃದ್ಧಿ ಇಲಾಖೆಗಳನ್ನು ಪುನರ್ ಸಂಘಟಿಸಿ ಆದೇಶಿಸಲಾಗಿದೆ. ಸದರಿ ಪುನರ್ ಸಂಘಟನೆಯಲ್ಲಿ ಜಾಗೃತ ಕೋಶ ಸಚಿವಾಲಯ ವಿಭಾಗಕ್ಕೆ ಮೇಲೆ (2)ರಲ್ಲಿ ಓದಲಾದ ಸರ್ಕಾರದ ಅಧಿಸೂಚನೆಯಲ್ಲಿ ಇಲಾಖೆಯ ಅಧಿಕಾರಿ/ನೌಕರರನ್ನು ಹಂಚಿಕೆ ಮಾಡಿ ಸ್ಥಳ ನಿಯುಕ್ತಿಗೊಳಿಸಲಾಗಿದೆ.

ಮೇಲೆ (3)ರಲ್ಲಿ ಓದಲಾದ ಪತ್ರದಲ್ಲಿ ಆಯುಕ್ತರು, ಕೃಷಿ ಇಲಾಖೆ, ಇವರು ಕೃಷಿ ಇಲಾಖೆಯಲ್ಲಿ ಎಲ್ಲಾ ಯೋಜನೆಗಳ ಸಮರ್ಪಕ ಅನುಷ್ಠಾನಕ್ಕಾಗಿ ರಾಜ್ಯ ಮಟ್ಟದಲ್ಲಿ ಜಾಗೃತ ಕೋಶವನ್ನು ಕೃಷಿ ಸಚಿವಾಲಯದ ಅಡಿಯಲ್ಲಿ ರಚಿಸಲಾಗಿದೆ. ಅಪರ ಕೃಷಿ ನಿರ್ದೇಶಕರು, ಜಾಗೃತ ಕೋಶದ ಮುಖ್ಯಸ್ಥರಾಗಿದ್ದು, ಇವರ ಅಧೀನದಲ್ಲಿನ ಎರಡು ವಿಭಾಗಗಳಲ್ಲಿ ಜಂಟಿ ಕೃಷಿ ನಿರ್ದೇಶಕರ ನೇತೃತ್ವದ ತಂಡಗಳನ್ನು ರಚಿಸಲಾಗಿದೆ. ಬೆಂಗಳೂರು ವಿಭಾಗವು ಬೆಂಗಳೂರಿನ ಕೇಂದ್ರಸ್ಥಾನವಾಗಿದ್ದು, ಇವರ ವ್ಯಾಪ್ತಿಗೆ ಬೆಂಗಳೂರು ಮತ್ತು ಮೈಸೂರು ಕಂದಾಯ ವಿಭಾಗಗಳು ಒಳಪಟ್ಟಿರುತ್ತವೆ. ಅದೇ ರೀತಿ ಬೆಳಗಾವಿ ವಿಭಾಗಕ್ಕೆ ಬೆಳಗಾವಿ ಮತ್ತು ಗುಲ್ಬರ್ಗಾ ಕಂದಾಯ ವಿಭಾಗಗಳ ಜಿಲ್ಲೆಗಳು ಒಳಪಟಿದ್ದು, ಬೆಳಗಾವಿ ಕೇಂದ್ರಸ್ಥಾನವಾಗಿರುತ್ತದೆ. ಇಲಾಖೆಯಲ್ಲಿ ವಿವಿಧ ಯೋಜನೆಗಳ ಅನುಷ್ಠಾನ ಮತ್ತು ಗುಣಮಟ್ಟದ ಕೃಷಿ ಪರಿಕರ ಮತ್ತು ಕಾಮಗಾರಿಗಳ ಸಮರ್ಪಕ ಅನುಷ್ಠಾನಗಳ ದಾಯಿತ್ವ ಪಾರದರ್ಶಕತೆ (Accountability) (Transparency) ಮತ್ತು ನ್ಯಾಯಯುತ ಆಡಳಿತ (Probity in Governance) ಇವುಗಳು ಅನುಷ್ಠಾನವಾಗುತ್ತಿದೆಯೇ ಎಂಬುದನ್ನು ಪರಿಶೀಲಿಸುವುದು ಜಾಗೃತ ಕೋಶದ ಮುಖ್ಯ ಉದ್ದೇಶವಾಗಿದ್ದು ಈ ಜಾಗೃತ ಕೋಶಗಳಲ್ಲಿನ ಅಧಿಕಾರಿಗಳು ನಿರ್ವಹಿಸಬೇಕಾದ ಕರ್ತವ್ಯ ಮತ್ತು ಜವಾಬ್ದಾರಿಗಳ ಬಗ್ಗೆ ಆದೇಶ ಹೊರಡಿಸುವಂತೆ ಕೋರಿರುತ್ತಾರೆ.

ಕೃಷಿ ಆಯುಕ್ತರ ಪ್ರಸ್ತಾವನೆಯನ್ನು ಪರಿಶೀಲಿಸಿ, ಸಚಿವಾಲಯ ಜಾಗೃತ ಕೋಶದ ಕರ್ತವ್ಯ ಮತ್ತು ಜವಾಬ್ದಾರಿಗಳನ್ನು ನಿಗಧಿ ಪಡಿಸಿ ಆದೇಶ ಹೊರಡಿಸಲು ಸರ್ಕಾರವು ನಿರ್ಧರಿಸಿದೆ. ಅದರಂತೆ ಈ ಕೆಳಕಂಡ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ಕೃಇ 182 ಕೃಪಸೇ 2014,**
**ಬೆಂಗಳೂರು, ದಿನಾಂಕ: 25-10-2014**

ಪ್ರಸ್ತಾವನೆಯಲ್ಲಿ ವಿವರಿಸಲಾದ ಅಂಶಗಳ ಹಿನ್ನೆಲೆಯಲ್ಲಿ ಸರ್ಕಾರವು ಜಾಗೃತ ಕೋಶ, ಸಚಿವಾಲಯ ವಿಭಾಗವು ಸುಗಮವಾಗಿ ಕರ್ತವ್ಯ ನಿರ್ವಹಿಸಲು ಅನುವಾಗುವಂತೆ ಆ ಕೋಶಕ್ಕೆ ಕೆಳಕಂಡ ಕರ್ತವ್ಯ ಮತ್ತು ಅಧಿಕಾರಗಳನ್ನು ನಿಗಧಿಪಡಿಸಿ ಆದೇಶಿಸಿದೆ;

1. ಜಾಗೃತ ಕೋಶವು ಸ್ವತಂತ್ರ ಘಟಕವಾಗಿ ಸಚಿವಾಲಯದ ಕೃಷಿ ಇಲಾಖೆಯ ಅಧೀನದಲ್ಲಿ ಕರ್ತವ್ಯ ನಿರ್ವಹಿಸತಕ್ಕದ್ದು.
2. ಜಾಗೃತ ಕೋಶವು ಕೃಷಿ ಇಲಾಖೆಯ ಅಧೀನ ಕಛೇರಿಗಳಿಗೆ ಅನಿರೀಕ್ಷಿತ ಭೇಟಿ ನೀಡಿ ತಪಾಸಣೆ ನಡೆಸತಕ್ಕದ್ದು.
3. ಜಾಗೃತ ಕೋಶವು ಇಲಾಖೆಯ ಅಧೀನ ಕಛೇರಿಗಳಿಗೆ ಆಗಾಗ್ಗೆ ಭೇಟಿ ನೀಡಿ ಇಲಾಖೆಯ ವಿವಿಧ ಯೋಜನೆಗಳ ಕುರಿತು ಪರಿಶೀಲಿಸಿ, ನ್ಯೂನತೆಗಳ ಬಗ್ಗೆ ವರದಿ ಮಾಡುವುದು.
4. ಇಲಾಖೆಯ ವಿವಿಧ ಯೋಜನೆಗಳ ಅನುಷ್ಠಾನದ ಕುರಿತು ಸಾರ್ವಜನಿಕರಿಂದ/ ಜನಪ್ರತಿನಿಧಿಗಳಿಂದ ಮತ್ತು ಸರ್ಕಾರದಿಂದ ಸ್ವೀಕೃತವಾಗುವ ದೂರುಗಳ ಕುರಿತು ಕೂಲಂಕಷವಾಗಿ ಪರಿಶೀಲಿಸುವುದು / ತನಿಖೆ ನಡೆಸಿ ಅಭಿಪ್ರಾಯದೊಂದಿಗೆ ಸರ್ಕಾರಕ್ಕೆ ವರದಿ ನೀಡುವುದು.
5. ಇಲಾಖೆಯಲ್ಲಿ ವಿವಿಧ ಯೋಜನೆಗಳ ಕಾಮಗಾರಿಗಳ ಅನುಷ್ಠಾನ, ಕೃಷಿ ಪರಿಕರಗಳ ಸರಬರಾಜು ಮತ್ತು ಅವುಗಳ ಗುಣಮಟ್ಟದ ಬಗ್ಗೆ ಪರಿಶೀಲಿಸಿ ಸರ್ಕಾರಕ್ಕೆ ವರದಿ ಮಾಡತಕ್ಕದ್ದು.
6. ರೈತರಿಗೆ ಬೀಜ, ರಸಗೊಬ್ಬರ ಹಾಗೂ ಕೀಟನಾಶಕಗಳು ಸರಿಯಾದ ರೀತಿಯಲ್ಲಿ ವಿತರಣೆಯಾಗುತ್ತಿದೆಯೇ ಎಂಬ ಬಗ್ಗೆ ಪರಿಶೀಲಿಸುವುದು.
7. ರಾಜ್ಯದಲ್ಲಿ ರಸಗೊಬ್ಬರ ನಿಯಂತ್ರಣ ಆದೇಶ, ಕೀಟನಾಶಕ ಕಾಯ್ದೆ ಹಾಗೂ ಬೀಜ ಅಧಿನಿಯಮಗಳು ಸರಿಯಾಗಿ ಜಾರಿಯಾಗುತ್ತಿದೆಯೇ ಅಥವಾ ಉಲ್ಲಂಘನೆಯಾಗುತ್ತಿದೆಯೇ ಎಂಬ ಬಗ್ಗೆ ಪರಿಶೀಲಿಸಿ ಸರ್ಕಾರಕ್ಕೆ ವರದಿ ಮಾಡತಕ್ಕದ್ದು.
8. ಜಿಲ್ಲಾ ಮಟ್ಟದಲ್ಲಿ ಕಾರ್ಯನಿರ್ವಹಿಸುತ್ತಿರುವ ಜಾರಿದಳ ಅಧಿಕಾರಿಗಳ ಮೇಲುಸ್ತುವಾರಿ ಮಾಡುವುದಲ್ಲದೆ, ಜಾಗೃತ ಕೋಶದ ಕೆಲಸ ಕಾರ್ಯಗಳಿಗೆ ಅವರ ಸೇವೆಯನ್ನು ಬಳಸಿಕೊಳ್ಳುವುದು.
9. ಹೋಬಳಿ ಮಟ್ಟದ ರೈತ ಸಂಪರ್ಕ ಕೇಂದ್ರಗಳಲ್ಲಿ ಸಮರ್ಪಕ ದಾಖಲಾತಿಗಳ ನಿರ್ವಹಣೆ, ವಿವಿಧ ಪರಿಕರಗಳ ವಿತರಣೆ ವಿವಿಧ ಯೋಜನೆಗಳ ಮತ್ತು ಕಾಮಗಾರಿಗಳ ಬಗ್ಗೆ ಅನಿಯತವಾಗಿ ( Random) ಪರಿಶೀಲಿಸಿ ವರದಿ ಮಾಡುವುದು.

10. ರಾಜ್ಯದಲ್ಲಿ ವಿವಿಧ ಕೃಷಿ ಪರಿಕರ ಉತ್ಪಾದಿಸುವ/ಮಾರಾಟ ಮಾಡುವ ವಿವಿಧ ಸಂಸ್ಥೆಗಳ ಗುಣಮಟ್ಟ ಖಾತರಿಪಡಿಸಿಕೊಳ್ಳುವ ಬಗ್ಗೆ ಪರಿಶೀಲನೆ ಮಾಡುವುದು ಹಾಗೂ ಅಗತ್ಯ ಕಂಡು ಬಂದಲ್ಲಿ ಸಂಬಂದಿಸಿದ ಅಧಿಕಾರಿಗಳಿಗೆ ಸೂಕ್ತ ಕ್ರಮ ಜರುಗಿಸಲು ಶಿಫಾರಸ್ಸು ಮಾಡುವುದು.

11. ಇಲಾಖೆಯ ವಿವಿಧ ಯೋಜನೆ ಮತ್ತು ಕಾಮಗಾರಿಗಳನ್ನು ಮಾರ್ಗಸೂಚಿಗನುಗುಣವಾಗಿ ಅನುಷ್ಠಾಗೊಳಿಸಿರುವ ಬಗ್ಗೆ ಅನಿಯತವಾಗಿ (Random) ಪರಿಶೀಲಿಸುವುದು.

12. ಕಾಮಗಾರಿಗಳ ಅನುಷ್ಠಾನದ ಬಗ್ಗೆ ಇಲಾಖೆಯಲ್ಲಿ ವಿವಿಧ ಹಂತದ ಅಧಿಕಾರಿಗಳಿಗೆ ನಿಗಧಿ ಪಡಿಸಿರುವ ಮಾನದಂಡಗಳ ಪ್ರಕಾರ ಅಳತೆ ತಪಾಸಣೆ ನಿರ್ವಹಿಸಿರುವ ಬಗ್ಗೆ ಪರಿಶೀಲಿಸುವುದು.

13. ಜಾಗೃತ ಕೋಶವು ವಿವಿಧ ಯೋಜನೆಗಳ ಸಮರ್ಪಕ ಅನುಷ್ಠಾನ ಹಾಗೂ ನ್ಯೂನತೆಗಳ ಸರಿಪಡಿಸುವಿಕೆಯ ಬಗ್ಗೆ ಒತ್ತು ನೀಡುವುದು ಮತ್ತು ಅನುಷ್ಠಾನದಲ್ಲಿ ಉದಾಸೀನತೆ, ನಿರ್ಲಕ್ಷತೆ, ಮಾರ್ಗಸೂಚಿಗಳ ಉಲ್ಲಂಘನೆ ಹಾಗು ಹಣ ದುರುಪಯೋಗವಾಗಿದ್ದಲ್ಲಿ ಸಂಬಂಧಪಟ್ಟವರ ವಿರುದ್ಧ ಶಿಸ್ತು ಕ್ರಮ ಜರುಗಿಸಲು ಸರ್ಕಾರಕ್ಕೆ ಶಿಫಾರಸ್ಸು ಮಾಡುವುದು.

14. ಸಾರ್ವಜನಿಕರು ಆನ್‌ಲೈನ್‌ನಲ್ಲಿ ದೂರಗಳನ್ನು ಸಲ್ಲಿಸಲು ಅನುವಾಗುವಂತೆ ಹಾಗೂ ಜಾಗೃತ ಕೋಶ ನಿರ್ವಹಣಾ ವ್ಯವಸ್ಥೆಯನ್ನು ನಿರ್ವಹಿಸಲು ಅನುವಾಗುವಂತೆ ಅಂತರ್ಜಾಲ ತಾಣವನ್ನು ಅಭಿವೃದ್ಧಿ ಪಡಿಸುವುದು.

15. ಸಾರ್ವಜನಿಕರು/ಆನ್‌ಲೈನ್ ಮತ್ತಿತ್ತರ ಮುಖಾಂತರ ಸ್ವೀಕೃತವಾದ ದೂರಗಳ ಮೇಲೆ ಕೈಗೊಂಡ ಪ್ರಗತಿಯ ಬಗ್ಗೆ ಪ್ರಗತಿಯನ್ನು ಸದರಿ ಅಂತರ್ಜಾಲದಲ್ಲಿ ಅಳವಡಿಸತಕ್ಕದ್ದು.

16. ಜಾಗೃತ ಕೋಶವು ಆಯಾ ತಿಂಗಳಲ್ಲಿ ಕೈಗೊಂಡ ಪ್ರವಾಸ, ತಪಾಸಣೆ ಮತ್ತಿತರ ಕಾರ್ಯಗಳ ವಿವರಗಳುಳ್ಳ ದಿನಚರಿಯನ್ನು ಮುಂದಿನ ತಿಂಗಳ 10ನೇ ತಾರೀಖಿನೊಳಗೆ ಸಲ್ಲಿಸತಕ್ಕದ್ದು.

17. ಸರ್ಕಾರವು ವಹಿಸುವ ಇತರೆ ಎಲ್ಲಾ ಕೆಲಸಗಳನ್ನು ನಿರ್ವಹಿಸುವುದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಹಾಗೂ ಅವರ ಹೆಸರಿನಲ್ಲಿ,

(ಎಸ್.ಆರ್.ಬಸವರಾಜಯ್ಯ)
ಸರ್ಕಾರದ ಅಧೀನ ಕಾರ್ಯದರ್ಶಿ,
ಕೃಷಿ ಇಲಾಖೆ.
(ಸೇವೆಗಳು ಮತ್ತು ಸಮನ್ವಯ)

ಇವರಿಗೆ:-

1. ಪ್ರಧಾನ ಮಹಾಲೇಖಪಾಲರು, ಕರ್ನಾಟಕ ಬೆಂಗಳೂರು.
2. ಆಯುಕ್ತರು, ಕೃಷಿ ಇಲಾಖೆ, ಶೇಷಾದ್ರಿ ರಸ್ತೆ, ಬೆಂಗಳೂರು.

3. ಆಯುಕ್ತರು, ಜಲಾನಯನ ಅಭಿವೃದ್ಧಿ ಇಲಾಖೆ, ಕಾವೇರಿ ಭವನ, ಬೆಂಗಳೂರು.
4. ಅಪರ ಕೃಷಿ ನಿರ್ದೇಶಕರು, ಜಾಗೃತ ಕೋಶ, ಸಚಿವಾಲಯ ವಿಭಾಗ, ಕೃಷಿ ಇಲಾಖೆ, ಬೆಂಗಳೂರು.
5. ಕೃಷಿ ಇಲಾಖೆಯ ಎಲ್ಲಾ ಅಪರ ಕೃಷಿ ನಿರ್ದೇಶಕರು, ಜಂಟಿ ಕೃಷಿ ನಿರ್ದೇಶಕರು, ಉಪ ಕೃಷಿ ನಿರ್ದೇಶಕರು, ಸಹಾಯಕ ಕೃಷಿ ನಿರ್ದೇಶಕರು, (ಕೃಷಿ ಆಯುಕ್ತರ ಮೂಲಕ)
6. ಜಂಟಿ ಕೃಷಿ ನಿರ್ದೇಶಕರು, (ಜಾಗೃತ ದಳ) ಬೆಳಗಾವಿ / ಬೆಂಗಳೂರು.
7. ಉಪ ಕೃಷಿ ನಿರ್ದೇಶಕರು, ಸಹಾಯಕ ಕೃಷಿ ನಿರ್ದೇಶಕರು(ಜಾಗೃತ ದಳ)
8. ಸರ್ಕಾರದ ಪ್ರಧಾನ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಕೃಷಿ ಇಲಾಖೆ.
9. ಸರ್ಕಾರದ ಉಪ ಕಾರ್ಯದರ್ಶಿ-1&2, ಕೃಷಿ ಇಲಾಖೆ.
10. ಸಮನ್ವಯ ಶಾಖೆ/ ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.